ಮೈಸೂರ ಗೆಜೆಟ್.

ನಂ. 45 ಸರ್ಕಾರದಿಂದ ಪ್ರಯಿಷ್ ಆದ್ದು. ಸ್ಯ 1885.

ಬೆಂಗಳೂರು, ಶನಿವಾರ, ನವೆಂಬರ್ ತಾ|| 7, ಸ್ಯ 1885.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ವೆಸಿದೆಂಟರು, ಚೀಫ್ ಜಡ್ಜ್‌ರಿಯವರು, ಸರ್ವೆ ವ ಇನಾಂ ಸೂಪರ್ಡಿಟೆಂಡೆಂಟರು, ಕಾಂಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮೈಸೂರು ಸ್ಟೇಟ್‌ರೇಯಿಲ್‌ವೆ, ರಿಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬರಹೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಶನ್ಸ್ ಜಡ್ಜ್‌ರು, ಡಿ|| ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಡಿಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾವ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಅಕ್ಟುಗಳು ವ ರೆಗ್ಯುಲೇಷಣಗಳು–
1885ನೇ ಇಸವಿಯ II ವ IIIನೇ ನಂಬರ್ ರೆಗ್ಯುಲೇಷ್ಯನ್‌ಗಳು.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾವ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 4ನೇ ಅಕ್ಟೋಬರ್ 1885.

ಕ್ಯಾಂಪ್ ನಂ. 1165—72.—ಸರ್ವರ ತಿಳುವಳಿಕೆ ಬಗ್ಗೆ ಇವರಿಂದ ಪ್ರಕಟಿಸಲ್ಪಡುವದೇನಂದರೆ, ಮೈಸೂರು ದೇಶದ ಉತ್ಪತ್ತೀ ಬಾಬತು ಸಂದಲಿಮದರ ಸಾಲೀಯಾನಾ ಪರಾಜು ಆಯಾ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಮತ್ತು ಫಾರೆಸ್ಟು ಆಫೀಸರುಗಳಿಂದ ಇದರಡಿ ಕಂಡ ಸ್ಥಳಗಳಲ್ಲೂ ತಾರೀಖುಗಳಲ್ಲೂ ನಡಿಸಲ್ಪಡುವದು.

		ಸುಮಾರು ಟ್ಯಾಗಳು.
ಸೊರಬದ ಕೋಶ.	10ನೇ ನವಂಬರ್ 1885.	250
ಅನಂತಪುರ	14ನೇ ಡಿಟೋ	200
ಶಿವಮೊಗ್ಗಾ	18ನೇ ಡಿಟೋ	600
ತೀರ್ಥಹಳ್ಳಿ	23ನೇ ಡಿಟೋ	250
ಚಿಕ್ಕಮಗಳೂರು	30ನೇ ಡಿಟೋ	200 / ಇನಾಂ 100
ಹಾಸನ	5ನೇ ಡಿಸಂಬರ್ ಡಿಟೋ	400
ಶ್ರೀರಂಗಪಟ್ಣ	10ನೇ ಡಿಟೋ	500
ಹುಣಸೂರು	14ನೇ ಡಿಟೋ	
ಬೆಂಗಳೂರು	19ನೇ ಡಿಟೋ	150

ಹರಾಜಿನ ಷರತ್ತುಗಳು—ಸನ್ 1874ನೇ ಇಸವಿ ಡಿಸೆಂಬರ್ 5ನೇ ಮತ್ತುಂ 48ನೇ ನಂಬರ್ ಮೈಸೂರು ಗೆಜೆಟ್ಟಿನಲ್ಲಿ ಘಾಯಿಷ್ ಮಾಡಲ್ಪಟ್ಟ ಪ್ರಕಾರ ಯಿರತಕ್ಕವು, ಮತ್ತು ಹರಾಜು ಕಾಲದಲ್ಲಿ ಘೋಷಿಸಲ್ಪಡುವವು.

ತಾರೀಖು 12ನೇ ಅಕ್ಟೋಬರ್ 1885.

ನಂ. 141.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿಕ್ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಂಬಂಧಾನಕ್ಕೋಸ್ಕರ ಕ್ರಮಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡಿಕ್ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು; ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಪುರುವಾಗಿ, ಉಳಿಕೆ ಯೊವದೂ ಇಲ್ಲದೆ ಗ್ರಾಮವು ಚಡ ದರಖಾಸ್ತುದಾರನಿಗೆ ಹರಾಜ್ ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತೀಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಸಬ್ ಡಿವೀಜ್ ಆಫೀಸರವರು ತಮ್ಮ ಯಚ್ಛ್ಯಾದೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಕೀಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ಪ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಫ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ವ ಇತರ ಖಿರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜ್ ಮುಕ್ತಾಯ ಮಾಡಲ್ಪಡತಕ್ಕದ್ದು; ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಕಾಯಮಾದ್ದಾಗಿರುವದಿಲ್ಲ.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಕಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಧರ್ದೆ ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಸಬ್ ಡಿವೀಜ್ ಆಫೀಸರವರಿಂದ ರುಜು ಮೊಹರ್ ಮಾಡೋಣವಾದ ಬಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು; ತಪಸೀಲಿನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತಿಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ ಪಟ್ಟುಂತೆ ಎಣಿಸುವ ಜನಗಳು, ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ. ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ಡಿಸ್ಟ್ರಿಕ್ಟು. ತಾಲ್ಲೂಕು. ಹೋಬ್ಳಿ. ಗ್ರಾಮ.	ಜೋಡಿದಾರರ ಹೆಸರು.	ಅಂದಾಜು ಬೀಜವರೀ.	ಅಂದಾಜು ಹುಟ್ಟುವಳೀ ಯಾ ಬೇರೀಜು.	ಸಾಲೀಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟೆರೆಂಟೆ.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜು ಮಾಡಲ್ಪಡುತ್ತೊ ಅಂಥಾ ಸರಕಾರದ ಕಂದಾಯದ ಬಾಕಿ.			ಹರಾಜು ತಾರೀಖು ಮೈಸೂರ.
		ಖಂ. ಕೂ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.			
ಕಡೂರು. ಚಿಕ್ಕನಾಯಕನಹಳ್ಳಿ. ಹೊಸದುರ್ಗ. ಜೋಡಿ ಹೊನ್ನವಳ್ಳಿ.	ರಾಘವೇಂದ್ರಾ ಚಾರಿ, ಇತರ 7 ಮಂದಿ	0 0 0	481 1 6	416 1 0	110 3 0	ಈಶ್ವರ	1877—78	ಸ್ಯ 1885ನೇ ಇಸವಿ ನವಂಬರ್ 18ನೇ ತಾರೀಖಿನ ಬೆಳಿಗ್ಗೆ ಹತ್ತು ಗಂಟೆಯಲ್ಲಿ ಹಾಸನ ಕಛೇರಿಯಲ್ಲಿ ಅನುಭವದಾರ್ರ ರೂಬರು.
					13 11 5	ವಿಭು	1881—82	
					24 3 8	ಚಿತ್ರಭಾನು	1882—83	
					30 7 5	ಸ್ವಭಾನು	1883—84	
					41 13 1	ತಾರಣ	1884—85	
					2 0 0	ನೋಟೀಸ್ ಫೀಜ್		
					50 4 1	ಬಡ್ಡೀ		
				ಜುಮ್ಲಾ	272 10 8			
					95 14 0	ಬಾಂಡ್ ಲಾಗವಜು		
				ವಟ್ಟು ಜುಮ್ಲಾ	368 8 8			

ತಾರೀಖು 27ನೇ ಅಕ್ಟೋಬರ್ 1885.

ಸರಕೀಟ್ ನಂ. 1270–71.—ದಿವಾನರವರ ಪೊಲೀಸ್ ಸೆಕ್ರಿಟೇರಿ ವುದ್ಯೋಗವು ಇದರಿಂದ ಮೋಹೂಫ್ ಮಾಡಲ್ಪಟ್ಟಿರುತ್ತೆ.

ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಮೆ|| ಎಲ್. ರಿಕೆಟ್ಸ್ ಯವರು, ಮೈಸೂರು ಶೀಮೆಯ ಪೋಲೀಸ್ ಇನ್ಸ್ಪೆಕ್ಟರ್ ಜನರಲ್‌ರಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ.

ಕೆಪ್ಟ್ ಎ. ಹೆಚ್. ಮೆಕ್ಕಿಂಟಯರ್‌ಯವರು, ಬೆಂಗಳೂರು ಡಿಸ್ಟ್ರಿಕ್ಟ್‌ನ ಡೆಪ್ಯೂಟಿ ಕಮಿಷನರ್ ವ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ—ಕೂಡ್ಲೆ ಉದ್ಯೋಗದ ಮೇಲೆ ಹೋಗತಕ್ಕದ್ದು.

ಫೈಜ್‌ರಾಬ್ದಿ ಸಬ್ ಡಿವಿಜ್ ಅಫೀಸರರಾದ ಫಸ್ಟ್ ಗ್ರೇಡ್ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ವಿ. ಪಿ. ಮಾಧವರಾವ್ ಬಿ. ಎ. ಯವರು, ಶಿವಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ವ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ. ಕೂಡ್ಲೆ ವುದ್ಯೋಗದ ಮೇಲೆ ಹೋಗತಕ್ಕದ್ದು.

ತಾರೀಖು 30ನೇ ಅಕ್ಟೋಬರ್ 1885.

ನಂ. 145.—ಬೆಂಗಳೂರು ಮ್ಯುನಿಸಿಪಲ್ ರೆಗ್ಯುಲೇಷನಿನ 226ನೇ ಸೆಕ್ಷನ್ ನಿಯಮಗಳನುಸರಿಸಿ, ಷಹರ್ ಮ್ಯುನಿಸಿಪಾಲಿಟಿಗೋಸ್ಕರ ಉಂಟಾದ ಇದರಡಿ ಕಂಡ ಬೈಲಾ ಯಾನೇ ನಿಬಂಧನೆಯು ಮೈಸೂರು ಶ್ರೀಮನ್ ಮಹಾರಾಜಾ ಸರ್ಕಾರದವರಿಂದ ಮಂಜೂರ್ರಾಡಲ್ಪಟ್ಟು ಸರ್ವೇರ ತಿಳುವಳಿಕೆ ಬಗ್ಗೆ ಇದರ ಮೂಲಕ ಪ್ರಕಟಿಸಲ್ಪಡುತ್ತೆ.

ಬೈಲಾ ನಂ. 23.—ಸ್ವಚ್ಛವಾಗಿ ಬೇವಾರಸಾಗಿ ಮ್ಯುನಿಸಿಪಲ್ ಸರಹದ್ದಿನ ವಳಗೆ ಆಲಿಯುತ್ತಿರುವ ನಾಯಿಗಳು ಕೊಲ್ಲಲ್ಪಡುವವು. ತಮ್ಮ ನಾಯಿಗಳನ್ನು ಕಾಪಾಡಲು ಇಚ್ಛೈವುಳ್ಳ ತಮಾಂ ಜನಗಳೂ, ಅವುಗಳನ್ನು ಕಟ್ಟ ಹಾಕಬೇಕೆಂತಲೂ ಅಥವಾ ಆಲಿಯುವದಕ್ಕೆ ಬಿಟ್ಟರೆ ಅವುಗಳಿಗೆ ಕುತ್ತಿಗೆಪಟ್ಟಿ ಹಾಕಬೇಕೆಂತಲೂ ಕೇಳಿಕೊಳ್ಳಲ್ಪಟ್ಟಿರುತ್ತಾರೆ.

ನಂ. 146.—ಸ್ಯ 1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ನಿಯಮಗಳನುಸರಿಸಿ ಇದರಿಂದ ಪ್ರಕಟಪಡಿಸುವದೇನಂದರೆ, ಇದರಡಿ ಕಂಡ ಪಟ್ಟಿಯಲ್ಲಿ ವಿವರಿಸಲ್ಪಟ್ಟ ವಿಸ್ತೀರ್ಣವುಳ್ಳ ಜವಿನಾನು ಸರ್ಕಾರ ಕೆಲಸದ ಬಗ್ಗೆ ಅಂದರೆ ತರೀಕೆರೆ ಮ್ಯುನಿಸಿಪಾಲಿಟಿಯಲ್ಲಿ ಗುರಪ್ಪನ ಬೀದಿಯಿಂದ ರಸ್ತೆ ಬಡಾಯಿಸುವ ಬಗ್ಗೆ ಬೇಕಾಗಿರುತ್ತೆ:—

ತಿಪ್ಪುಗಳು	ತಾಲ್ಲೂಕು.	ಗ್ರಾಮ.	ಸ್ವಂತಗಾರರ ಹೆಸರು.	ಜಪ್ತಿಯಾದ ಆಸ್ತಿ.	ವಿಸ್ತೀರ್ಣ.	ಚತುರ್ಗಡಿ.
1	2	3	4	5	6	7
ಕಸಬಾ	ಪಿರಿಯಾಪಟ್ಣ	ಹಿಟ್ನೋ	ರಾಜಪ್ಪ, ಬಸಪ್ಪ, ವೀರಭದ್ರಪ್ಪ ಫಣಿಯಪ್ಪ ಜಿ. ಪಟಣ್ಣ ಹೆ. ವೆಂಕಟಗಿರಿಯಪ್ಪ ಕೆ. ಕೇತವಯ್ಯ	ಹಿಟ್ನೋ ಗ್ರಾಮದಲ್ಲಿ ಇರುವ ಮಿದರ ಮಿಡಿನಾರುಗಳು ಜಪ್ತಿಯಾಗಿದ್ದು ಅವುಗಳ ಕೊಣೆಯಾದ ಜಪ್ತಿಯಾಗಿದ್ದು	ಲಾಂ. ರುಂ. ಚದರಗಜ. 15 × ½ = 7½ 13 × 1 = 13 5½ × 1 = 5½ 5 × 1 = 5 5½ × 1 = 5½ ಜುಮ್ಲಾ ಚದರ ಗಜಗಳು 36½	ಉತ್ತರಕ್ಕೆ—ದಾಸಂಣನ ಮನೆ. ಪೂರ್ವಕ್ಕೆ—ನಾಲ್ಕನೆ ಮುದ್ದಿನಲ್ಲಿ ಕಂಡ 5 ಜನಗಳ ಮನೆಸಾಲು. ದಕ್ಷಿಣಕ್ಕೆ—ಪೇಟಿ ಇಂದ ಚಿಕ್ಕ ಮ ೀತಿಗೆ ಹೋಗುವ ರಸ್ತೆ. ಪೆ್ಚಿಮಕ್ಕೆ—ಚಿಕ್ಕಂಣ ಮತ್ತು ಅವರ ನಾಲ್ಕು ಜನಗಳ ಮನೆಸಾಲು

ತಾರೀಖು 21ನೇ ಮಾರ್ಚಿ 1883.

ನಂ. 84.—ಕಾರ್ಯಾರ್ಥ ದಿವಾನರವರನ್ನು ಭೇಟಿ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮ ಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಗೆ ಹಿಂದಿನ ದಿನ ಸೆಕ್ರಿಟೇರಿಯವರಿಗೆ ತಮ್ಮ ಕಾರ್ಡಿಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಬಮೋಜೇಬ್ ಹುಕ್ಕುಂ,
ಆರ್. ವಿಜಯಿಾಂದ್ರರಾವ್,
ಸೆಕ್ರಿಟೇರಿ.